

ಕಿತ್ತಾರು ಕಡೆ ಕೆರೆ ಕಡೆ ಹೋಗುವ ಗಾಡಿ ದಾರಿಯ ಚರಂಡಿ ಸೇರುತ್ತಿತ್ತು. ಇನ್ನೊಂದು ಬದಿಯಲ್ಲಿ ಮೇಸ್ಟರ ತೋಟದ ತಂತಿ ಬೇಲಿ ಇದ್ದುದರಿಂದ ಟ್ರಾಕ್ಟರು ವಗೈರೆ, ಏನೇ ಇದ್ದರೂ ರುದ್ರಮ್ಮನ ಹೊಲಕ್ಕೆ ಹೆಡ್ಡಪ್ಪನ ಹೊಲದ ಕಡೆಯಿಂದಲೇ ಹೋಗಬೇಕಾಗಿತ್ತು.

ಬಾಯಿ ಬುಡುಕ ರುದ್ರಮ್ಮ ಸಣ್ಣಪುಟ್ಟ ವಿಷಯಕ್ಕೂ ಕಾಲು ಕೆರೆದು ಜಗಳ ತೆಗೆಯುತ್ತಿದುದ್ದರಿಂದ ಹೊನ್ನಮ್ಮನಿಗೂ ರುದ್ರಮ್ಮನಿಗೂ ಆಗಿ ಬರುತ್ತಿರಲಿಲ್ಲ.

ರುದ್ರಮ್ಮನ ಹೊಲದಲ್ಲಿ ಒಂದಿಬ್ಬರು ತೆಂಗಿನಕಾಯಿ, ತೆಂಗಿನಕಡ್ಡಿ ಹಿಡಿದು ಬೋರ್ವೆಲ್ ಪಾಯಿಂಟ್ ಮಾಡುವ ಸಿದ್ಧತೆಯಲ್ಲಿದ್ದರು. ಇತ್ತ ಜೆಸಿಬಿ ಮಣ್ಣು ಬಗೆದು ಒಂದೆಡೆಗೆ ಎತ್ತರದ ದಿಂಡು ಕಟ್ಟಿ ಇನ್ನೊಂದೆಡೆ ತಿರುಗಿ ನಿಂತು ಬಗೆದ ಮಣ್ಣನ್ನು ಕಿತ್ತಾರಿನ ಕಡೆ ಕೊರೆದು ಹೋದ ಹೊಲದ ಕೊರಕಲಿಗೆ ಚಾಚಿ ಸುರಿಯುತ್ತಿತ್ತು.

ರುದ್ರಮ್ಮನ ಗಂಡ ಅದನ್ನು ಕೌತುಕದಿಂದ ನೋಡುತ್ತಾ ನಿಂತಿದ್ದ. ಕಡಗು ದಾಟಿ ನಿಂತ ರುದ್ರಮ್ಮ 'ಅದೇನ್ ಹಂಗೆ ನೋಡ್ತಾ ನಿಂತ್ಗಂಡೀದಿಯ... ಬಾ ಅಲ್ಲಿ ಪಾಯಿಂಟ್ ಮಾಡರು ಕಾಯ್ತ ಇಲ್ವ' ಎಂದು ಮೂದಲಿಸಿದಳು.

'ತಡಿ ಮಾರಾಯ್ತಿ ಎಂತಕೆ ಹಿಂಗೆ ಹೊಂಡ ತೋಡ್ತಾ ಅವ್ರೆ ಅಂತ ನೋಡ್ತಾ ಇದೀನಿ' ಎಂದಿದ್ದ.

ರುದ್ರಮ್ಮನಿಗೆ ಸಿಟ್ಟು ಬಂದಿತ್ತು.. ವಾಪಾಸು ಕಡಗು ದಾಟಿ 'ಅದು ಹೆಡ್ಡಪ್ನ ಹೂಣಕೆ ಬಾ' ಎನ್ನುತ್ತಾ ಗಂಡನ ಕೈ ಹಿಡಿದೆಳೆಯುತ್ತಾ ಹೊರಟು ಹೋಗಿದ್ದಳು.

ಅವರು ದಾಟಿ ಹೋಗಲಿ ಎಂದು ಅಲ್ಲಿಯೇ ತುಸು ದೂರದಲ್ಲಿ ನಿಂತು ಕಾಯುತ್ತಿದ್ದ ಹೊನ್ನಮ್ಮನ ಎದೆಗೆ ಗುದ್ದಿದಂತಾಯಿತು.

ತನ್ನ ಕಣ್ಣಿನ ಕೆಂಡವನ್ನು ಗಂಡನ ಮೇಲೆ ಕಾರಿ ಕಾವು ತೀರಿಸಿಕೊಳ್ಳಲೆಂದು ಅವನಿಗಾಗಿ ಹುಡುಕಾಡಿದಳು. ಹಾಗೆಯೇ ಹೊಸದಾಗಿ ಮಣ್ಣು ಪೇರಿಸಿದ್ದ ಬದುವಿನ ಕಡೆಗೆ ಹೋದಳು.

ಅಲ್ಲಿ ಹೆಡ್ಡಪ್ಪ, ತನ್ನ ಡ್ರೈವರ್ ಗೆಳೆಯರೊಂದಿಗೆ ಸಂಭ್ರಮದಲ್ಲಿ ಕೇಕೆ ಹಾಕುತ್ತಾ ಕುಳಿತಿದ್ದ. ಕೈಗಳಲ್ಲಿ ಪ್ಲಾಸ್ಟಿಕ್ ಲೋಟಗಳಲ್ಲಿ ತುಂಬ ಹಳದಿ ದ್ರವ, ಮುಂದೆ ಕಾಗದದಲ್ಲಿ ಕಾರ ಬಟಾಣಿ ಕಾಳುಗಳು, ಸುತ್ತ ಚದುರಿ ಬಿದ್ದ ಚಾಯ್ಸ್‌ನ ಖಾಲಿ ಪ್ಯಾಕೆಟುಗಳು. ಮೊದಲೇ ಕುದಿಯುತ್ತಿದ್ದ ಹೊನ್ನಮ್ಮನ ಸಿಟ್ಟು ಭುಗಿಲೆದ್ದಿತು.

'ಇಲ್ಲಿ ಕೂತಿದೀಯಾ ನೀನು... ಈ ಹೆಂಡಗುಡುಕ್ರ ಕಟ್ಕಂಡು' ಎಂದು ಅಬ್ಬರಿಸಿದ್ದಳು.

ಅನಿರೀಕ್ಷಿತ ಪರಿಸ್ಥಿತಿಯಿಂದ ಬೆಚ್ಚಿಬಿದ್ದ ಅವರು ಕೈಯಲ್ಲಿ ಗ್ಲಾಸ್ ಹಿಡಿದೇ ಎದ್ದು ನಿಂತುಕೊಂಡು ಪಿಳಿ ಪಿಳಿ ಕಣ್ಣು ಬಿಡತೊಡಗಿದ್ದರು.

ಸಿಟ್ಟಿನ ಭರದಲ್ಲಿ ಹೊನ್ನಮ್ಮನಿಗೆ ಮುಂದೇನು ಮಾಡಬೇಕೆಂದು ತೋಚಲಿಲ್ಲ. ಎದುರಿಗೆ ಒಂದು ಹಿಡಿಗಾತ್ರದ ಕಲ್ಲು ಬಿದ್ದಿತ್ತು. ಅದನ್ನೆತ್ತಿಕೊಂಡು ಬೀಸಿ ಒಗೆದಳು. ಅದು ಕಾರ ಬಟಾಣಿಯ ಮೇಲೆ ಬಿದ್ದು ಕಾಳು ಚೆಲ್ಲಾಪಿಲ್ಲಿಯಾದವು. ಕೈಯಲ್ಲಿ ತುಳುಕುವ ಗ್ಲಾಸ್ ಹಿಡಿದುಕೊಂಡೇ ಗೆಳೆಯರು ನೆಗೆದು ಓಡತೊಡಗಿದ್ದರು.

'ಇನ್ನೊಂದು ಸಲ ಎಲ್ಲಾದ್ರೂ ಚಾಯ್ಸ್ ಪಾಯ್ಸ್ ಕುಡ್ಕಂಡು ನನ್ ಕಣ್ಣಿಗ್ ಬೀಳಿ... ಗಾಳಿ ಬಿಡ್ಸಿ ಬುಡ್ತೀನಿ' ಎಂದು ಹೊನ್ನಮ್ಮ ಕೋಪದಿಂದ ಕಂಪಿಸುತ್ತಲೇ ಚೀರಿದ್ದಳು.

* * *

ಹೊಂಡ ತೋಡಿ ಹೋಗಿ ವಾರ ಕಳೆಯಿತು... ಹದಿನೈದು ದಿನ ಕಳೆಯಿತು. ಸರ್ಕಾರದ ಕಡೆಯಿಂದ ಯಾರದೇ ಸುಳಿವಿಲ್ಲ. 'ಇನ್ನೊಂದು ತಿಂಗಳೂ ಇಲ್ಲ ಮುಂಗಾರು ಶುರುವಾಗಕೆ... ಅಡ್ ಮಳೆಲಿ ನೀರು ತುಂಬಿಕಂಡ್ರೆ ಹೊಂಡದ್ ಮಣ್ ಕುಸಿಯಾದಿಲ್ವ...' ಹೊನ್ನಮ್ಮ ಗಂಡನೆದುರಿಗೆ ಪೇಚಾಡಿದ್ದಳು.

ಎಚ್ಚೆತ್ತುಕೊಂಡ ಹೆಡ್ಡಪ್ಪ ಒಂದು ದಿನ ಜಿಲ್ಲಾ ಪಂಚಾಯ್ತಿ ಆಫೀಸಿಗೆ ಹೋಗಿ ಅಧಿಕಾರಿಯನ್ನು ನೋಡಿ ಗೋಗರೆದ. ಪ್ರಯೋಜನವಾಗಲಿಲ್ಲ. 'ಏನ್ ಮಾಡದು ಗೌಡ್ರೆ ಸರ್ಕಾರದಿಂದ ರಿಲೀಜ್ ಆದ ಫಂಡಿಗೆ ಈಗ ಕೆಲಸ ಮಾಡಿದೀವಿ... ಫಂಡ್ ಬರ್ಲಿ ಮುಂದೆ ನೋಡಣ... ಏನ್ ನನ್ ಕೈಯಿಂದ ದುಡ್ ಹಾಕಿ ನಿಮಗೆ ಕಲ್ ಕಟ್ಸಿ ಕೊಡಕಾಗುತ್ತಾ... ಇದೂ ಏನು ಅರ್ಥಿಕವಾಗಿ ಲಾಭದಾಯಕ ಕೆಲಸ ಅಲ್ಲ... ಮುಂದಿನ ಸಾಲಿನಿಂದ ಹೊಂಡಕ್ಕೆ ದೊಡ್ಡ ಟಾರ್ಪಲ್ ಹೊದಿಸಿ ಅದರ ಮೇಲೆ ನೀರು ನಿಲ್ಲುವಂತೆ ಮಾಡಬೇಕು ಎಂದು ಸರ್ಕಾರಕ್ಕೆ ಯೋಜನೆ ಹೋಗಿದೆ...' ಎಂದು ಏನೇನೋ ಸಮಜಾಯಿಷಿ ಹೇಳಿ ಕಳಿಸಿದ್ದ.

ರಾಕೇಶನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ತನಗೆ ಆಪ್ತರಾಗಿದ್ದ ಊರ ಕಡೆಯ ಒಂದಿಬ್ಬರು